ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 9, 11, ಮತ್ತು 12 ನೇ ಪ್ರತಿವಾದಿ ಪರ ವಕೀಲರಿಂದ

ನಮ್ಮ ತಂದೆಯ ತಂದೆಯ ಹೆಸರು ಹೊಟ್ಟೆತಿಮ್ಮಯ್ಯ. ಹೊಟ್ಟೆತಿಮ್ಮಯ್ಯನಿಗೆ 5 ಗಂಡು ಮತ್ತು ಒಬ್ಬಳು ಹೆಣ್ಣು ಮಕ್ಕಳು, ಚಿಕ್ಕತಿಮ್ಮಯ್ಯ, ಗಿರಿತಿಮ್ಮಯ್ಯ ಹಳೆಊರಯ್ಯ, ಮೂಗಾಳಯ್ಯ, ದೊಡ್ಡತಿಮ್ಮಯ್ಯ. ಹೆಣ್ಣು ಮಗಳ ಮರಿತಿಮ್ಮಕ್ಕ. ಅವರನ್ನು ಪಿಚ್ಚಕುಂಟನಹಳ್ಳಿಗೆ ಕೊಟ್ಟು ಮದುವೆ ಮಾಡಿದ್ದರು. ನಾನು ಮತ್ತು 1 ರಿಂದ 12 ನೇ ಪ್ರತಿವಾದಿಗಳು ದೊಡ್ಡತಿಮ್ಮಯ್ಯನ ಕುಟುಂಬಸ್ಥರು ಎಂದರೆ ಹೌದು. ದೊಡ್ಡತಿಮ್ಮಯ್ಯನ ಸಹೋದರರ ಕುಟುಂಬಸ್ಥರು ಎಲ್ಲರೂ ಹೆಜ್ಜಾಲದಲ್ಲಿ ವಾಸವಿರುತ್ತಾರೆ ಎಂದರೆ ಹೌದು. ಮರಿತಿಮ್ಮಕ್ಕನ ಮಕ್ಕಳು ಮೊಮ್ಮಕ್ಕಳು ಎಲ್ಲರೂ ಪಿಚ್ಚಕುಂಟನಪಾಳ್ಯದಲ್ಲಿ ವಾಸವಿರುತ್ತಾರೆ ಎಂದರೆ ಹೌದು.

ದೊಡ್ಡತಿಮ್ಮಯ್ಯನಿಗೆ ಎಷ್ಟು ಜನಮಕ್ಕಳು ಎಂದರೆ 3 ಜನ ಗಂಡು ಮತ್ತು 3 ಹೆಣ್ಣು ಮಕ್ಕಳು. ಮೊದಲನೆಯರು ಲಕ್ಷ್ಮಕ್ಕ ತೀರಿಕೊಂಡಿರುತ್ತಾರೆ. ಲಕ್ಷ್ಮಕ್ಕನಿಗೆ ಒಂದು ಹೆಣ್ಣು ಒಂದು ಗಂಡು ಮಗ. ಮಗ ಲಕ್ಷ್ಮಿನರಸಿಂಹಯ್ಯ ತೀರಿಕೊಂಡಿರುತ್ತಾರೆ. ಲಕ್ಷ್ಮಿನರಸಿಂಹಯ್ಯನ ಹೆಂಡತಿ ಜೀವಂತ ಇರುತ್ತಾರೆ. ಅವರ ಮಕ್ಕಳು ನವೀನ್ ಕುಮಾರ್ ಮತ್ತು ನಾರಾಯಣ ಸಹ ಜೀವಂತ ಇರುತ್ತಾರೆ. ಅವರಿಬ್ಬರು ಮಾದಪಟ್ಟಣದಲ್ಲಿ ವಾಸವಿರುತ್ತಾರೆ. ಹೆಣ್ಣು ಮಗಳು ಚಿಕ್ಕಮ್ಮ ಜೀವಂತ ಇರುತ್ತಾರೆ. ಲಕ್ಷ್ಮಿನರಸಿಂಹಯ್ಯನ ಹೆಂಡತಿ ಮತ್ತು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನಾ ಎಂದರೆ ಹೌದು.

ನಾನು ಈ ದಾವೆ ಸಲ್ಲಿಸುವ ಮೊದಲು ಪ್ರತಿವಾದಿಗಳಿಗೆ ನೋಟಿಸು ಕೊಟ್ಟಿರುತ್ತೇನಾ ಎಂದರೆ ಇಲ್ಲ. 2 ನೇಯವರು ಕೆಂಚಪ್ಪ ಅವರು ತೀರಿಕೊಂಡಿರುತ್ತಾರೆ. ಅವರು 10-12 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಆದರೆ ಇಸವಿ ಜ್ಞಾಪಕ ಇಲ್ಲ. 3 ನೇಯವರು ಸೀನಪ್ಪ ಅವರು ಸಹ 10-12 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. 4 ನೇಯವರು ರಂಗಪ್ಪ. ಅವರು ತೀರಿಕೊಂಡು 10-12 ವರ್ಷಗಳು ಆಗಿರಬಹುದು. ಚಿಕ್ಕಮ್ಮ ಸದರಿ ರಂಗಪ್ಪನ ಹೆಂಡತಿ ಎಂದರೆ ಹೌದು. ಅವರು ಹೆಜ್ಜಾಲದಲ್ಲಿ ವಾಸವಿರುತ್ತಾರೆ. 8 ನೇ ಪ್ರತಿವಾದಿ ನನ್ನ ಅಕ್ಕನ ಮಗಳು. ರಂಗಪ್ಪನ ಹೆಂಡತಿಯನ್ನು ಈ ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿರುತ್ತೇನಾ ಎಂದರೆ ಮಾಡಿರುತ್ತೇನೆ. ರಂಗಪ್ಪನ ಹಿಂದೆ ತಿಮ್ಮಕ್ಕ ಜನನಿಸಿದ್ದು ಅವರು ಸಹ ತೀರಿಕೊಂಡಿರುತ್ತಾರೆ. ಅವರಿಗೆ ಮದುವೆಯಾಗಿತ್ತಾ ಎಂದರೆ ಇಲ್ಲ. ಅವರು ಯಾರ ಮನೆಯಲ್ಲಿ ವಾಸವಿದ್ದರು ಎಂದರೆ ಕೆಂಚಪ್ಪನ ಮನೆಯಲ್ಲಿ ತೀರಿಕೊಳ್ಳುವವರೆಗೂ ಇದ್ದರು. ಕೊನೆಯ ಮಗಳು ನಾನು ವಾದಿ. ನಮ್ಮ ತಾಯಿ ಕೆಂಚಮ್ಮ ನಮ್ಮ ತಂದೆಗೂ ಮುನ್ನ ತೀರಿಕೊಂಡಿರುತ್ತಾರೆ ಎಂದರೆ ಹೌದು. ನಮ್ಮ ತಾಯಿ ತೀರಿಕೊಂಡಾಗ ನನಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದರೆ 10-12 ವರ್ಷ. ನಮ್ಮ ತಂದೆ ತೀರಿಕೊಂಡಾಗ 15-16 ವರ್ಷ ವಯಸ್ಸಾಗಿತ್ತು. ನಮ್ಮ ತಂದೆ ತೀರಿಕೊಂಡಾಗ ನಾನು ಎಲ್ಲಿ ವಾಸವಿದ್ದೆ ಎಂದರೆ ನಮ್ಮ ಊರು ಹೆಜ್ಜಾಲದಲ್ಲಿ ಇದ್ದೆ. ಆಗ ನನಗೆ ಇನ್ನು ವಿವಾಹ ಆಗಿರಲಿಲ್ಲವಾ ಎಂದರೆ ಹೌದು ಆಗಿರಲಿಲ್ಲ. ನನ್ನ ವಿವಾಹ ಆಗಿ 50 ವರ್ಷಗಳು ಆಗಿರಬಹುದು. ನನ್ನನ್ನು ಪಿಚ್ಚಕುಂಟನಹಳ್ಳಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ. ನನ್ನ ಮದುವೆಯಾದಾಗ ಯಾರ ಮನೆಯಲ್ಲಿ ಇದ್ದೆ ಎಂದರೆ ನಾವು ಒಟ್ಟು ಕುಟುಂಬದಲ್ಲಿ ಇದ್ದ ಮನೆಯಲ್ಲಿಯೇ ಇದ್ದೆ. ಮದುವೆಯಾದ ನಂತರ ನನ್ನ ಗಂಡನ ಮನೆಗೆ

ಹೋಗಿರುತ್ತೇನೆ ಎಂದರೆ ಹೌದು. ಈಗಲೂ ನಾನು ನನ್ನ ಗಂಡನ ಮನೆಯಲ್ಲೇ ಇರುತ್ತೇನೆ ಎಂದರೆ ಹೌದು.

ನನ್ನ ಸಹೋದರ ಕೆಂಚಪ್ಪನ ಮನೆ ಹೆಜ್ಜಾಲದಲ್ಲಿ ಇದೆ ಎಂದರೆ ಹೌದು. ಸೀನಪ್ಪನ ಮನೆ ಸಹ ಹೆಜ್ಜಾಲದಲ್ಲಿ ಇದೆ ಎಂದರೆ ಹೌದು. ರಂಗಪ್ಪ ಎಸ್ ವಿ ಟಿ ಕಾಲೋನಿ ಹೆಜ್ಜಾಲದಲ್ಲಿ ಮನೆ ಇದೆ ಎಂದರೆ ಹೌದು. ಕೆಂಚಪ್ಪ ಮನೆ ಕಟ್ಟಿಕೊಂಡು ಸುಮಾರು 30 ವರ್ಷಗಳು ಆಗಿವೆ ಎಂದರೆ ಇಲ್ಲ 2 ವರ್ಷಗಳ ಹಿಂದೆ ಕಟ್ಟಿಕೊಂಡಿರುತ್ತಾರೆ. ಸೀನಪ್ಪ 10-15 ವರ್ಷಗಳಿಂದ ಆ ಮನೆಯಲ್ಲಿ ಇರುತ್ತಾರೆ. ಗಲಾಟೆಯಾದ ವಿಚಾರ ಗೊತ್ತಿದೆ ಆ ಗಲಾಟೆ 1998 ರಲ್ಲಿ ಆಗಿರುತ್ತದೆ ಎದರೆ ಹೌದು. ಗಲಾಟೆಯಾದ 4 ವರ್ಷಗಳ ನಂತರ ರಂಗಪ್ಪ ಎಸ್ ವಿ ಟಿ ಕಾಲೋನಿಗೆ ಮನೆ ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ಹೌದು. ರಂಗಪ್ಪನ ಮಕ್ಕಳು 9 ರಿದ 12 ನೇ ಪ್ರತಿವಾದಿಗಳು ಎಂದರೆ ಹೌದು. ಕೆಂಚಪ್ಪನ 2 ವರ್ಷಗಳಲ್ಲಿ ಕಟ್ಟಿಕೊಂಡ ಮನೆಗಿಂತ ಮೊದಲು ಅವರಿಗೆ ಒಂದು ಮನೆ ಇತ್ತು ಎಂದರೆ ಹೌದು. ಕೆಂಚಪ್ಪ ಮುಂಚಿನಿಂದಲೂಲ ಹಳೆ ಮನೆಲ್ಲೆ ಇದ್ದರೂ. ಕೆಂಚಪ್ಪ ಮತ್ತು ಸೀನಪ್ಪ ಕಟ್ಟಿಕೊಂಡಿರುವ ಮನೆ ತಾತನ ಕಾಲದಿಂದ ಬಂದ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಹೌದು. ಕೆಂಚಪ್ಪ ಮತ್ತು ಸೀನಪ್ಪನವರ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನಾ ಎಂದರೆ ಹೌದು. ಆ ಮನೆಗಳ ಖಾನೇಷುಮಾರಿ ನಂ ಹೇಳಲು ಬರುತ್ತದಾ ಎಂದರೆ 55 ಇರಬಹುದು.

ರಂಗಪ್ಪ ಎಸ್ ವಿ ಟಿ ಕಾಲೋನಿಯಲ್ಲಿ ಸೈಟು ಖರೀದಿ ಮಾಡಿ ನಂತರ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಹೌದು. ನನ್ನ ಅಕ್ಕ ಲಕ್ಷ್ಮಮ್ಮ ನ ಮಕ್ಕಳು ಮತ್ತು ಮೊಮ್ಮಕ್ಕಳು ನಮ್ಮ ಮನೆಗೆ ಹೋಗಿ

ಬಂದು ಮಾಡುತ್ತಾರೆ ಎಂದರೆ ಹೌದು. ನಾನು ಈ ದಾವೆ ಸಲ್ಲಿಸುವ ಮೊದಲು ಲಕ್ಷ್ಮಮ್ಮನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ನಾನು ದಾವೆಯ ಬಗ್ಗೆ ಹೇಳಿರುತ್ತೇನಾ ಎಂದರೆ ಹೌದು.

ನಿಪಿ-1 ರ ವಂಶವೃಕ್ಷವನ್ನು ನಾನೇ ಹಾಜರುಮಾಡಿರುತ್ತೇನೆ. ನಿಪಿ-1 ಏನು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದ ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಿಪಿ-1 ರ ಒಕ್ಕಣೆಯನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ನಾನೇ ಹೇಳಿ ಬರೆಸಿರುತ್ತೇನೆ. ಲಕ್ಷ್ಮಮ್ಮನನ್ನು ನಮ್ಮ ತಂದೆಯ ಹಿರಿಯ ಮಗಳು ಎಂದು ಹೇಳಿದ್ದು ನಿಪಿ-1 ರಲ್ಲಿ ಲಕ್ಷ್ಮಮ್ಮ 4 ನೇ ಮಗಳು ಎಂದು ತೋರಿಸಿದ್ದು ಸರಿ ಇದೆಯಾ ಎಂದರೆ ಹೌದು. ಆದರೆ ಅದು ತಪ್ಪು ಇದೆ. ನಿಪಿ-1 ರಲ್ಲಿ ತಿಮ್ಮಕ್ಕನ ಹೆಸರಿನ ಮುಂದೆ ಮದುವೆಯಾಗಿದೆ ಎಂದು ಬರೆಸಿ ನಂತರ ಅದನ್ನು ಹೊಡೆದು ಹಾಕಿರುತ್ತೇನೆ ಎಂದರೆ ಹೌದು. ಆ ಜಾಗದಲ್ಲಿ ಯಾವುದೇ ಸಹಿ ಇಲ್ಲ ಎಂದರೆ ಹೌದು. ನಿಪಿ-1 ಬರೆಸಿದಾಗ ಅವರಿಗೆ ವಿವಾಹ ಆಗಿತ್ತಾ ಎಂದರೆ ಹೌದು. ಸಾಕ್ಷಿ ಮುಂದುವರೆದ ತಿಮ್ಮಕ್ಕನಿಗೆ ಮದುವೆಯಾಗಿರಲಲ್ಲ ಎನ್ನುತ್ತಾರೆ. ನಿಪಿ-1 ರ ವಂಶವೃಕ್ಷ ತಯಾರು ಮಾಡುವ ವೇಳೆಗೆ ಲಕ್ಷ್ಮಮ್ಮ ತೀರಿಕೊಂಡಿರುತ್ತಾರೆ ಎಂದರೆ ಹೌದು. ಲಕ್ಷ್ಮಮ್ಮನ ಮಕ್ಕಳ ಹೆಸರು ನಿಪಿ-1 ರಲ್ಲಿ ಇಲ್ಲ ಎಂದರೆ ಹೌದು. ನಿಪಿ-1 ರ ವಂಶವೃಕ್ಷವನ್ನು ನನಗೆ ಅನುಕೂಲವಾಗುವಂತೆ ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ಸೃಷ್ಟಿ ಮಾಡಿಕೊಂಡ ದಾಖಲೆ ಎಂದರೆ ಸರಿಯಲ್ಲ.

ಎಷ್ಟು ಐಟಂಗಳ ಮೇಲೆ ನಾನು ದಾವೆ ಸಲ್ಲಿಸಿರುತ್ತೇನೆ ಎಂದರೆ 5 ರಿಂದ 6 ಐಟಂ ಸ್ವತ್ತುಗಳ ಮೇಲೆ. ಆ ಸ್ವತ್ತುಗಳ ಸರ್ವೇ ನಂಬರ್

ಹೇಳಲು ಬರುತ್ತದಾ ಎಂದರೆ ಸರ್ವೇ ನಂಬರ್ 15/1 ರಲ್ಲಿ 24 ಗುಂಟೆ, ಸರ್ವೇ ನಂಬರ್ 15/3 ರಲ್ಲಿ 24 ಗುಂಟೆ, ಸರ್ವೇ ನಂಬರ್ 74/1 ರಲ್ಲಿ ಅಂದಾಜು ಒಂದು ಕಾಲು ಎಕರೆ, ಸರ್ವೇ ನಂಬರ್ 39 ರಲ್ಲಿ 1 ಕಾಲು ಎಕರೆ ಇದೆ. ಸರ್ವೇ ನಂಬರ್ 92/1 ರಲ್ಲಿ 4 ವರೆ ಎಕರೆ ಇದೆ. ಸರ್ವೇ ನಂಬರ್ 15/1 ರ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿರುತ್ತೇನಾ ಎಂದರೆ ಹೌದು. ಸರ್ವೇ ನಂಬರ್ 15/1 ರ ಚಕ್‌ಬಂದಿ ಹೇಳಲು ಬರುತ್ತದಾ ಎಂದರೆ ಪೂರ್ವಕ್ಕೆ ರೇವಣ್ಣಸಿದ್ದಯ್ಯ, ಪಶ್ಚಿಮಕ್ಕೆ ದೊಡ್ಡಲಿಂಗಯ್ಯ, ಉತ್ತರಕ್ಕೆ ಕೆರೆ ಮತ್ತು ದಕ್ಷಿಣಕ್ಕೂ ಸಹ ಕೆ ಇರುತ್ತದೆ. ನಿಪಿ-8 ರಿಂದ ನಿಪಿ-10 ರ ಪಹಣಿ ಪತ್ರಿಕೆಯಲ್ಲಿ ನಮೂದಾಗಿರುವ ವೆಂಕಟರಮಣಯ್ಯ ನನಗೆ ಗೊತ್ತಿರುತ್ತಾರೆ. ವೆಂಕಟರಮಣಯ್ಯ ನಮ ಕುಟುಂಬದವರಾ ಎಂದರೆ ಇಲ್ಲ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನಾ ಎಂದರೆ ಇಲ್ಲ,

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎನ್ ಎಸ್ ಕುಲಕರ್ಣಿ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.